■ ವಿಶಾಖ ಎನ್.



# ಅವಕಾಶ ಬೇಕಿನ್ನೂ ಸಾನು

1990ರ ದಶಕದಲ್ಲಿ ಕುಮಾರ್ ಸಾನು, ಅಲ್ಕಾ ಯಾಗ್ನಿಕ್ ಕಂಠದ ಹಾಡುಗಳು ಗುನುಗುವಷ್ಟು ಜನಪ್ರಿಯವಾಗಿದ್ದವು. 'ಆಶಿಕಿ' ಸಿನಿಮಾದ ಹಾಡುಗಳಾಗಲೀ, 'ಬಾಜಿಗರ್' ಚಿತ್ರದ ಗೀತೆಗಳಾಗಲೀ ಜನರ ನಾಲಿಗೆಯ ಮೇಲೆ ಈಗಲೂ ನಲಿದಾಡುತ್ತವೆ.

ಈಗ ಕುಮಾರ್ ಸಾನು ಗೀತೆಗಳು ಹಾಡುಗಳ ರಿಯಾಲಿಟಿ ಶೋಗಳಲ್ಲಿ ಆಗೀಗ ಕೇಳುತ್ತಿರುತ್ತವೆ. ಅಂತಹ ಕಾರ್ಯಕ್ರಮಗಳಲ್ಲಿ ಅತಿಥಿ ಸೀಟಿನ ಮೇಲೆ ಕುಳಿತು ಕುಮಾರ್ ಸಾನು, ಚಿಣ್ಣರು ಅಥವಾ ಚಿನ್ನರು ಹಾಡುವ ತಮ್ಮ ಗತಕಾಲದ ಹಾಡುಗಳನ್ನು ಆಸ್ವಾದಿಸುತ್ತಾ ನಗು ತುಳುಕಿಸಬೇಕು. ಎಷ್ಟೋ ಹಳೆಯ ಹಿನ್ನೆಲೆ ಗಾಯಕ–ಗಾಯಕಿಯರ ಸ್ಥಿತಿ ಹೀಗೆಯೇ ಇದೆ.

ಕುಮಾರ್ ಸಾನು ಬರೀ ಹೀಗೆ ಸೀಟಿನ ಮೇಲೆ ಕುಳಿತು ಎದ್ದು ಬರುವವರ ಪೈಕಿ ಅಲ್ಲ. ಅವರು ತಮ್ಮೊಳಗೆ ಉಳಿದಿರುವ 'ಬೇಕು' ಎನ್ನುವ ಧ್ವನಿಯೊಂದನ್ನು ಹೊರಹಾಕಿದ್ದಾರೆ. 'ನಾನು ಎಲ್ಲಿ ಹೋದರೂ ಗೌರವ ಸಿಗುತ್ತದೆ. ನನ್ನ ಹಾಡುಗಳನ್ನು ಈಗಲೂ ಜನ ಮರೆತಿಲ್ಲ ಎನ್ನುವುದು ಖುಷಿ ಕೊಡುವ ವಿಷಯ. ಆದರೆ, ಬರೀ ಗೌರವವಷ್ಟೆ ಸಾಕೆ? ನಮ್ಮನ್ನು ಈಗಲೂ ಹಾಡಲು ಬನ್ನಿ ಎಂದು ಯಾಕೆ ಯಾರೂ ಅವಕಾಶ ಕೊಡುವುದಿಲ್ಲ' ಎಂಬ ಪ್ರಶ್ನೆಯನ್ನು ಅವರು ನೇರವಾಗಿ ಸ್ವರ ಸಂಯೋಜಕರಿಗೆ ಹಾಕಿದ್ದಾರೆ.

'ಇಜ್ಜತ್ ದೇತೇ ಹೈ... ಲೇಕಿನ್ ಕಾಮ್ ನಹೀ' (ಗೌರವ ಕೊಡುತ್ತಾರೆ... ಆದರೆ ಕೆಲಸ ಕೊಡುವುದಿಲ್ಲ) ಎನ್ನುವ ಕುಮಾರ್ ಸಾನು ಮಾತಿನ ಧ್ವನಿಯ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಚರ್ಚೆ ಕೂಡ ನಡೆದಿದೆ. ಹೆಚ್ಚೂ ಕಡಿಮೆ ಒಂಬತ್ತು ಅಕ್ಷರಗಳ ಹಿಂದೆ, ಕುಮಾರ್ ಸಾನು ಸಿನಿಮಾವೊಂದಕ್ಕೆ ಹಿನ್ನೆಲೆ ಗಾಯಕರಾಗಿ ಕೊನೆಯ ಬಾರಿಗೆ ಹಾಡಿದ್ದು. ಹೀಗಾಗಿ ಅವರ ಕೋರಿಕೆಗೆ ಅನುಭವಜನ್ಯ ಅರ್ಥವಿದೆ.

ಹೊಸಕಾಲದಲ್ಲಿ ತಾಜಾ ಕಂಠಗಳಿಗಾಗಿ ಬಹುತೇಕ ಸ್ವರ ಸಂಯೋಜಕರು ಹುಡುಕುತ್ತಾ ಇರುತ್ತಾರೆ. ಹೀಗಾಗಿ ಹಳಬರು ನೇಪಥ್ಯಕ್ಕೆ ಸರಿಯುವುದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ ಎನ್ನುವ ವಾದವೊಂದು ಇದೆ. ಕುಮಾರ್ ಸಾನು ಇದನ್ನೂ ಒಪ್ಪುವುದಿಲ್ಲ. 'ನಾನು ಇತ್ತೀಚೆಗೆ ಅಮೆರಿಕದಲ್ಲಿ ಒಂದು ಸಂಗೀತ ಕಾರ್ಯಕ್ರಮ ನೀಡಿದೆ. ಅಲ್ಲಿ ಸೇರಿದ್ದ ಅನೇಕರು ಈಗಲೂ ನನ್ನ ಹಳೆಯ ಹಾಡುಗಳನ್ನು ಗುನುಗುತ್ತಿದ್ದರು. ಟಿಕೆಟ್ ಇಡುವ ಕಾರ್ಯಕ್ರಮಗಳಿಗೂ ಒಳ್ಳೆಯ ಸಂಖ್ಯೆಯಲ್ಲಿ ಕೇಳುಗರು ಬರುತ್ತಾರೆ. ಇದರರ್ಥ ಈಗಲೂ ನನ್ನ ಕಂಠವನ್ನು ಕೇಳುವ ಕುತೂಹಲ ಉಳಿದಿದೆ ಎಂದೇ ಅಲ್ಲವೆ' ಎಂದು ಅವರು ವಾದಕ್ಕೆ ಪ್ರಶ್ನೆರೂಪದ ಉತ್ತರ ನೀಡುತ್ತಾರೆ. ಉದಿತ್ ನಾರಾಯಣ್, ಅಲ್ಕಾ ಯಾಗ್ನಿಕ್, ಸೋನು ನಿಗಮ್ ಕೂಡ ಈಗ ಹಾಡುವುದು ಅಪರೂಪವೇ ಆಗಿದೆ. ಸಾನು ಅಂತರಾಳದ ಅನುಭವ ಇವರದ್ದೂ ಆಗಿರಬಹುದು. ■





# ಅಮ್ಮ ಗಿಳಿ, ಮಗಳು ಮರಿಗಿಳಿ

'ದೇವರ 1' ತೆಲುಗು ಸಿನಿಮಾದ ಒಂದು ಮಧುರಗೀತೆ ಬಿಡುಗಡೆಯಾಗಿದೆ. ಕೆಂಪುಡುಗೆಯಲ್ಲಿ ಜಾಹ್ನವಿ ಕಪೂರ್ ಹಾಗೂ ಹೂಗಳ ಚಿತ್ರವಿರುವ ಅಂಗಿ ತೊಟ್ಟ ಜೂನಿಯರ್ ಎನ್‌ಟಿಆರ್ ನಡುವಿನ ರೊಮ್ಯಾಂಟಿಕ್ ದೃಶ್ಯಗಳನ್ನು ಆ ಹಾಡು ಒಳಗೊಂಡಿದೆ. ಶಿಲ್ಪಾ ರಾವ್ ಈ ಗೀತೆಯನ್ನು ಹಾಡಿದ್ದಾರೆ. ಹಿಂದಿ ಗಾಯಕಿಯಿಂದ ತೆಲುಗು ಭಾಷೆಯಲ್ಲಿಯೂ ಹಾಡಿಸಿರುವುದು ಮಾರುಕಟ್ಟೆ ತಂತ್ರವೇ ಹೌದು.

ಕೊರಟಾಲ ಶಿವ ನಿರ್ದೇಶನದ 'ದೇವರ 1' ಸಿನಿಮಾ ಜಾಹ್ನವಿ ಅಭಿನಯದ ಮೊದಲ ತೆಲುಗು ಚಿತ್ರ. ಒಂದು ಕಾಲದಲ್ಲಿ ಅವರ ತಾಯಿ ಶ್ರೀದೇವಿ, ದಕ್ಷಿಣ ಭಾರತದ ಸಿನಿಮಾಗಳಿಂದ ಹಿಂದಿ ಚಿತ್ರರಂಗಕ್ಕೆ ಹೋಗಿದ್ದವರು. ತಮ್ಮ ತಾಯಿಯ ಕಾಲ ಹಾಗೂ ತಮ್ಮ ಕಾಲವನ್ನು ಅಕ್ಕ–ಪಕ್ಕ ಇಟ್ಟು ಜಾಹ್ನವಿ ನೋಡಿ, ಮಾತನಾಡಿದ್ದು ಹೀಗೆ: 'ನಾನು ಸಹಜವಾಗಿ ನನ್ನತ್ತ ಬರುವ ಅವಕಾಶಗಳನ್ನು ಆತುಕೊಳ್ಳುತ್ತಿರುವೆ. 'ದೇವರ' ಕೂಡ ಹಾಗೆಯೇ ಒಲಿದುಬಂದ ಸಿನಿಮಾ. ಅಭಿನಯ, ಕುಣಿತ, ಮೋಜು ಎಲ್ಲವನ್ನೂ ಅನುಭವಿಸುವ ಅವಕಾಶ ನನಗೆ ಸಿಕ್ಕಿತು. ನನ್ನ ಅಮ್ಮ ಹಿಂದಿ ಸಿನಿಮಾಗೆ ಮೊದಲು ಹೋದಾಗ ಭಾಷೆ ಬರುತ್ತಿರಲಿಲ್ಲವಂತೆ. ಹೇಳಿಕೊಟ್ಟ ಸಂಭಾಷಣೆಯನ್ನು ಅವರು ಚಕ್ಕನೆ ಒಪ್ಪಿಸುತ್ತಿದ್ದರಷ್ಟೆ. ಅದಕ್ಕೇ ಅವರನ್ನು ಗಿಳಿ ಎಂದೇ ಆಗ ಕೆಲವರು ಕರೆಯುತ್ತಿದ್ದರೆನ್ನುವುದನ್ನು ಅವರೇ ಹೇಳಿಕೊಂಡಿದ್ದರು. ತೆಲುಗಿನ ವಿಷಯದಲ್ಲಿ ನಾನೂ ಗಿಳಿಯಂತೆಯೇ ಇದ್ದೆ. ಒಟ್ಟಾರೆ ಅನುಭವವಂತೂ ಸಂತಸ ತಂದಿದೆ.' ■